## ನಿಮ್ಮೊಡನೆ

# ನಾಗಾಗಳ ಮುಗುಳು, ಹತ್ರಾಸ್‌ನ ದೀನ ಕೊರಳು

ಮಹಿಳೆಯರ ಪ್ರವೇಶದೊಂದಿಗೆ ನಾಗಾಲ್ಯಾಂಡ್ ವಿಧಾನಸಭೆಗೆ ಶಾಪ ವಿಮೋಚನೆಯಾಗಿದೆ. ಅದೇ ಸಮಯಕ್ಕೆ, ಉತ್ತರಪ್ರದೇಶದ ಹತ್ರಾಸ್ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ತೀರ್ಪು ಹೊರಬಿದ್ದಿದೆ. 'ಅಂತರರಾಷ್ಟ್ರೀಯ ಮಹಿಳಾದಿನ' ಸಂದರ್ಭದಲ್ಲಿ ವರದಿಯಾಗಿರುವ ಈ ಎರಡು ಘಟನೆಗಳು ನಮಗೆ ಹೇಳುತ್ತಿರುವುದೇನು?




ಅಂತರರಾಷ್ಟ್ರೀಯ ಮಹಿಳಾ ದಿನದ ಸಂಭ್ರಮ ಹೆಚ್ಚಿಸುವ ರೀತಿಯಲ್ಲಿ, ನಾಗಾಲ್ಯಾಂಡ್ ವಿಧಾನಸಭೆಗೆ ಇದೇ ಮೊದಲ ಬಾರಿಗೆ ಇಬ್ಬರು ಮಹಿಳೆಯರು ಆಯ್ಕೆಯಾಗಿದ್ದಾರೆ. ಇದರೊಂದಿಗೆ, ಆ ರಾಜ್ಯದ ರಾಜಕಾರಣದಲ್ಲಿ ಹೊಸ ಅಧ್ಯಾಯ ಆರಂಭವಾಗಿದೆ. 1963ರಲ್ಲಿ ಸ್ವತಂತ್ರ ರಾಜ್ಯದ ಸ್ಥಾನಮಾನ ಪಡೆದ ನಾಗಾಲ್ಯಾಂಡ್‌ಗೆ 60 ವರ್ಷಗಳು ತುಂಬಿರುವ ಸಂದರ್ಭದಲ್ಲಿ ಈ ಐತಿಹಾಸಿಕ 'ಮಹಿಳಾ ಪರ್ವ' ಶುರುವಾಗಿದೆ. 'ನ್ಯಾಷನಲ್ ಡೆಮಾಕ್ರಟಿಕ್ ಪ್ರೋಗ್ರೆಸಿವ್ ಪಾರ್ಟಿ'(ಎನ್‌ಡಿಪಿಪಿ)ಯ ಹೆಖಾನಿ ಜಖಾಲು ಹಾಗೂ ಸಲ್ಹೌಟ್ ಮೊನೊಮೊ ಅವರು ನಾಗಾಲ್ಯಾಂಡ್ ರಾಜಕಾರಣಕ್ಕೆ ಹೊಸ ತಿರುವು ನೀಡಿರುವ ಮಹಿಳೆಯರು.

ಪಿತೃಪ್ರಧಾನ ವ್ಯವಸ್ಥೆ ಬಲಾಢ್ಯವಾಗಿರುವ ನಾಗಾಗಳ ನೆಲದಲ್ಲಿ ಮಹಿಳೆಯರು ಚುನಾವಣೆಯಲ್ಲಿ ಗೆಲ್ಲುವುದಿರಲಿ, ಸ್ಪರ್ಧಿಸುವುದೇ ಕಷ್ಟ. ಇಂಥ ವಿಷಮ ಸನ್ನಿವೇಶದಲ್ಲಿ ಇಬ್ಬರು ಮಹಿಳೆಯರು ವಿಧಾನಸಭೆ ಪ್ರವೇಶಿಸಿರುವುದಕ್ಕೆ ವಿಶೇಷ ಮಹತ್ವವಿದೆ. ಈ ಇಬ್ಬರು ಮಹಿಳೆಯರ ಸಾಧನೆಯ ಹಿಂದೆ ಅವರ ಅಪಾರ ಪರಿಶ್ರಮವಿದೆ. ಅಮೆರಿಕದಲ್ಲಿ ಶಿಕ್ಷಣ ಪಡೆದುಬಂದಿರುವ ಹೆಖಾನಿ, ವಕೀಲೆ ಹಾಗೂ ಸಾಮಾಜಿಕ ಕಾರ್ಯಕರ್ತೆಯಾಗಿ ಗುರ್ತಿಸಿಕೊಂಡವರು. ಕಳೆದ ಹದಿನೇಳು ವರ್ಷಗಳಿಂದ ಸಾರ್ವಜನಿಕ ಜೀವನದಲ್ಲಿರುವ ಅವರು, ಮಹಿಳೆಯರು ಮತ್ತು ಯುವಜನರ ಸಬಲೀಕರಣಕ್ಕಾಗಿ 'ಯೂಥ್‌ನೆಟ್' ಎನ್ನುವ ಸಂಸ್ಥೆ ಹುಟ್ಟುಹಾಕಿದ್ದಾರೆ. ಸಲ್ಹೌಟ್ ಅವರು ಕೂಡ ಸಾರ್ವಜನಿಕ ಜೀವನದಲ್ಲಿ ಗುರ್ತಿಸಿಕೊಂಡವರು. ಈಗ ಜನಪ್ರತಿನಿಧಿಗಳಾಗಿ ವಿಧಾನಸಭೆ ಪ್ರವೇಶಿಸಿರುವ ಈ ಇಬ್ಬರೂ ನಾಗಾಲ್ಯಾಂಡ್‌ನ ಸಮಸ್ತ ಹೆಣ್ಣುಮಕ್ಕಳ ಪ್ರತಿನಿಧಿಗಳಾಗಿದ್ದಾರೆ. ಹೊಸ ತಲೆಮಾರಿನ ಹೆಣ್ಣುಮಕ್ಕಳು ರಾಜಕಾರಣದಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳಲು ಪ್ರೇರಣೆಯಾಗಿದ್ದಾರೆ.

ನಾಗಾಲ್ಯಾಂಡ್‌ನ ವಿಧಾನಸಭೆ ಈವರೆಗೆ ಮಹಿಳೆಯರಿಗೆ ಬಾಗಿಲು ತೆರೆದುಕೊಂಡಿರಲಿಲ್ಲ ಎನ್ನುವುದು ಆಶ್ಚರ್ಯದ ಸಂಗತಿಯಂತೆ ಕಾಣಿಸುತ್ತಿದ್ದರೂ, ಒಟ್ಟಾರೆ ಭಾರತೀಯ ರಾಜಕಾರಣದಲ್ಲೂ ಮಹಿಳಾ ಪ್ರಾತಿನಿಧ್ಯದ ಪ್ರಮಾಣ ಸಮಾಧಾನಕರವಾಗಿಯೇನೂ ಇಲ್ಲ ಎನ್ನುವುದನ್ನು ಗಮನಿಸಬೇಕು. 2019ರ ಅಂಕಿಅಂಶಗಳ ಪ್ರಕಾರ, ದೇಶದ 4865 ಸಂಸದರು ಹಾಗೂ ಶಾಸಕರ ಪೈಕಿ, ಮಹಿಳಾ ಪ್ರತಿನಿಧಿಗಳ ಸಂಖ್ಯೆ 440 ಮಾತ್ರ (ಶೇ. 9). ಸಮಾನ ಅವಕಾಶಗಳ ಬಗೆಗಿನ ಚರ್ಚೆಗಳೆಲ್ಲ ಮಾತಿನ ರೂಪದಲ್ಲಿಯಷ್ಟೇ ಉಳಿದಿರುವುದನ್ನು ಈ ಅಂಕಿಅಂಶ ಸೂಚಿಸುವಂತಿದೆ. ಮಹಿಳೆಯರು ಗಣನೀಯ ಪ್ರಮಾಣದಲ್ಲಿ ರಾಜಕಾರಣದಲ್ಲಿ ತೊಡಗಿಕೊಳ್ಳುವ ಬಗ್ಗೆ ಬಣ್ಣದ ಮಾತುಗಳನ್ನಾಡುವ ರಾಜಕೀಯ ಪಕ್ಷಗಳು, ಅವಕಾಶ ನೀಡುವ ವಿಷಯದಲ್ಲಿ ಮಾತ್ರ ನಿರ್ಲಜ್ಜೆಯಿಂದ ಪುರುಷಪ್ರಧಾನ ಮನೋಧರ್ಮ ಪ್ರದರ್ಶಿಸಿವೆ. ಇದರಿಂದಾಗಿಯೇ, ಶಾಸನಸಭೆಗಳಲ್ಲಿ ಮಹಿಳೆಯರಿಗೆ ಶೇ. 33ರಷ್ಟು ಮೀಸಲಾತಿ ಕಲ್ಪಿಸುವ ಮಸೂದೆ ನನೆಗುದಿಗೆ ಬಿದ್ದಿದೆ.

ಮಹಿಳೆಯರಿಗೆ ಸಮಾನ ಅವಕಾಶಗಳನ್ನು ನೀಡುವ ವಿಷಯದಲ್ಲಿ ಯಾವ ದೇಶವೂ ಪೂರ್ಣ ಪ್ರಮಾಣದಲ್ಲಿ ಯಶಸ್ವಿಯಾಗಿಲ್ಲ. ಕೃಷಿ ಚಟುವಟಿಕೆಗಳಿಂದ ಹಿಡಿದು ಬಾಹ್ಯಾಕಾಶದ ಅಂಗಳದವರೆಗೆ ಮಹಿಳೆಯನ್ನು ಕಡೆಗಣಿಸಲಾಗಿದೆ. ಮುಂದುವರೆದ ದೇಶಗಳಲ್ಲಿ ಕೂಡ ಮಹಿಳೆಯರಿಗೆ ದೊರೆಯುತ್ತಿರುವುದು ಹೆಚ್ಚಿನ ಅವಕಾಶಗಳೇ ಹೊರತು ಸಮಾನ ಅವಕಾಶಗಳಲ್ಲ. ಸಮಾಜದ ಮುಖ್ಯ ವಾಹಿನಿಯಲ್ಲಿ ಮಹಿಳೆಯರಿಗೆ ಗಣನೀಯ ಪ್ರಮಾಣದಲ್ಲಿ ಅವಕಾಶ ಕಲ್ಪಿಸಿದ ದೇಶಗಳು ಅಭಿವೃದ್ಧಿಪಥದಲ್ಲೂ ಮುಂಚೂಣಿಯಲ್ಲಿವೆ ಎನ್ನುವುದು ಗಮನಾರ್ಹ.

ರಾಜಕಾರಣದಲ್ಲಿ ಹೆಚ್ಚಿನ ಪ್ರಾತಿನಿಧ್ಯ ಕಲ್ಪಿಸುವುದು ಮಹಿಳೆಯರ ಹಿತಾಸಕ್ತಿಗೆ ಮಾತ್ರವಲ್ಲ, ಒಟ್ಟಾರೆ ಸಮಾಜದ ಆರೋಗ್ಯಕ್ಕೂ ಪೂರಕವಾದುದು. ನೀತಿ ನಿರೂಪಕರ ಸ್ಥಾನದಲ್ಲಿ ಮಹಿಳೆಯರು ಇಲ್ಲದೆ ಹೋದರೆ, ಸಮಾಜದಲ್ಲಿ ಲಿಂಗಸೂಕ್ಷ್ಮತೆ ಸಾಧ್ಯವಾಗುವುದಿಲ್ಲ. ಈ ಮಾತಿಗೆ ನಿದರ್ಶನವಾಗಿ, ನಾಗಾಲ್ಯಾಂಡ್‌ನ ರಾಜ್ಯ ರಾಜಕಾರಣಕ್ಕೆ ಸ್ತ್ರೀಸ್ಪರ್ಶ ದೊರೆತಿರುವ ಸುದ್ದಿಯ ಜೊತೆಯಲ್ಲೇ ಉತ್ತರಪ್ರದೇಶದಿಂದ ವರದಿಯಾಗಿರುವ ವರದಿಯೊಂದನ್ನು ಗಮನಿಸಬೇಕು. 2020ರಲ್ಲಿ ಉತ್ತರಪ್ರದೇಶದ ಹತ್ರಾಸ್‌ನಲ್ಲಿ ದಲಿತ ಯುವತಿಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿತ್ತು. ಆ ಪೈಶಾಚಿಕ ಕೃತ್ಯದಲ್ಲಿ ಯುವತಿಯ ಬೆನ್ನುಮೂಳೆ ಗಾಸಿಗೊಂಡು, ಎರಡು ಕಾಲುಗಳು ಹಾಗೂ ಒಂದು ತೋಳಿನ ಮೂಳೆಗಳು ಮುರಿದಿದ್ದವು, ನಾಲಗೆ ತುಂಡಾಗಿತ್ತು. ಮೃತಪಟ್ಟ ಯುವತಿಯ ಕುಟುಂಬದವರನ್ನು ಬಲವಂತದಿಂದ ದೂರವಿರಿಸಿ, ಪೊಲೀಸರು ಅಂತ್ಯಸಂಸ್ಕಾರ ನಡೆಸಿದ್ದರು. ಆ ಪ್ರಕರಣದ ವಿಚಾರಣೆ ಮುಗಿದಿದ್ದು, ಆರೋಪಿಗಳಾಗಿದ್ದ ನಾಲ್ವರಲ್ಲಿ ಮೂವರು ಖುಲಾಸೆಗೊಂಡಿದ್ದಾರೆ, ಪ್ರಮುಖ ಆರೋಪಿಗಷ್ಟೇ ಜೀವಾವಧಿ ಶಿಕ್ಷೆಯಾಗಿದೆ. ಈ ವಿದ್ಯಮಾನವನ್ನು ಹೇಗೆ ಅರ್ಥೈಸುವುದು?

ದೇಶದ ಅಭಿವೃದ್ಧಿಯ ಬಗ್ಗೆ, ಸಂಸ್ಕೃತಿಯ ಬಗ್ಗೆ ವಿಶ್ವ ಬೆರಗಿನಿಂದ ನೋಡುತ್ತಿದೆ ಎನ್ನುವ ಅರ್ಥದ ಮಾತುಗಳನ್ನು ಎಗ್ಗಿಲ್ಲದೆ ಆಡುತ್ತೇವೆ. ಆದರೆ, ಆ ಅಭಿವೃದ್ಧಿಯಲ್ಲಿ, ಸಂಸ್ಕೃತಿಯಲ್ಲಿ ಹೆಣ್ಣಿನ ಪಾಲ್ಗೊಳ್ಳುವಿಕೆ ಎಷ್ಟರಮಟ್ಟಿಗಿದೆ ಎನ್ನುವುದರ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಹೆಣ್ಣಿಗೆ ಸಮಾನ ಅವಕಾಶಗಳಿಲ್ಲದ ಸಮಾಜವೊಂದರ ಅಭಿವೃದ್ಧಿಯ ಚಿತ್ರಣಗಳು ಎಷ್ಟರಮಟ್ಟಿಗೆ ಅಸಲಿ ಎನ್ನುವುದನ್ನು ತಿಳಿಯಲು ವಿಶೇಷ ಪಾಂಡಿತ್ಯದ ಅಗತ್ಯವಿಲ್ಲ.

■ ರಘುನಾಥ ಚ.ಹ.